**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:45/2019**

ಪಿರ್ಯಾದುದಾರರು: :ರಾಜ್ಯ ಸರ್ಕಾರ,
ಶ್ರೀಮಂಗಲ ಪೋಲೀಸ್ ಠಾಣೆ,

ವಿರುಧ್ಧ

ಆರೋಪಿಗಳು: 1. ಶ್ರೀ ನೆಲ್ಲೀರ ಸುಬ್ಬಯ್ಯ,
ತಂದೆ: ಪೌತಿ ಮಾದಪ್ಪ,
ಪ್ರಾಯ: 65 ವರ್ಷ,
ವಾಸ: ಬಿರುನಾಣಿ ಗ್ರಾಮ,
ವಿರಾಜಪೇಟೆ ತಾಲ್ಲೂಕು, ಕೊಡಗು.

2. ಶ್ರೀ ತಮಿಳರ ಆರ್ಮುಗಂ,
ತಂದೆ: ಯಲ್ಲಮುತ್ತು,
ಪ್ರಾಯ: 33 ವರ್ಷ,
ವಾಸ: ಬಿರುನಾಣಿ ಗ್ರಾಮ,
ವಿರಾಜಪೇಟೆ ತಾಲ್ಲೂಕು, ಕೊಡಗು.

ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ

ಪ್ರಶ್ನೆ ಸಂಖ್ಯೆ - 1 : ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?

ಉ: ಕೇಳಿದ್ದೇನೆ.

ಪ್ರಶ್ನೆ ಸಂಖ್ಯೆ - 2. ಪ್ರಾ.ಸಾ.1/ಚಾ.ಸಾ.1 ಶ್ರಿ ನೆಲ್ಲೀರ ರಾಜೇಂದ್ರು ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ:04.02.2018 ರಂದು ಸಂಜೆ 6.20 ರಲ್ಲಿ ಚಾ.ಸಾ.1 ರವರು ಅವರ ಕಾಫಿ ಕಣದಲ್ಲಿ ಕೆಲಸ ಮಾಡುತ್ತಿದ್ದಾಗ, ಆರೋಪಿಯಾದ ನೀವು ಅಲ್ಲಿಗೆ ಹೋಗಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಕೊರಳ ಪಟ್ಟಿ ಹಿಡಿದು ತಮ್ಮ ಬಲಗೈಯಿಂದ ಅವರ ಹಣೆಗೆ ಹೊಡೆದಿರುತ್ತೀರಿ. 2 ನೇ ಆರೋಪಿಯಾದ ನೀವು ಅವರನ್ನು ಹಿಡಿದಿರುತ್ತೀರಿ ಮತ್ತು ಕಾಫಿ ದೊಣ್ಣೆಯಿಂದ ಚಾ.ಸಾ.1 ರವರ ಹೊಟ್ಟೆಗೆ ಹೊಡೆದು ಕಾಲಿನಿಂದ ಒದ್ದಿರುತ್ತೀರಿ. ಆರೋಪಿಗಳಾದ ನೀವು ಚಾ.ಸಾ.1 ರವರಿಗೆ ಬೆಂಗಳೂರಿನಿಂದ ರೌಡಿಗಳನ್ನು ಕರೆದುಕೊಂಡು ಬಂದು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತೀರಿ, ಅದೇ ದಿನ ಚಾ.ಸಾ.1 ರವರು ಶ್ರೀಮಂಗಲ ಪೋಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ದಿ:07.02.2018 ರಂದು ಪೋಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿ ಕಾಫಿ ದೊಣ್ಣೆಯನ್ನು ಅಮಾನತ್ತು ಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉ: ಸುಳ್ಳು

ಪ್ರಶ್ನೆ ಸಂಖ್ಯೆ - 3. ಪ್ರಾ.ಸಾ.2/ಚಾ.ಸಾ.6 ನಿಶಾನ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಸರ್ವೆ ನಂ.176/4 ಜಮೀನು ಯಾರು ಹೆಸರಿನಲ್ಲಿದೆ ಎಂದು ಶ್ರೀಮಂಗಲ

ಪೊಲೀಸರು ಅವರನ್ನು ಕೇಳಿರುತ್ತಾರೆ ಅದರಂತೆ ಅವರು ನೆಲ್ಲೀರಿ ರಾಜೇಂದ್ರ ರವರ ಹೆಸರಿನಲ್ಲಿ ಇದೆ ಎಂದು ಚಾ.ಸಾ.6 ರವರು ನಿ.ಪಿ.3 ವರದಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉ:

**<u>ಪ್ರಶ್ನೆ ಸಂಖ್ಯೆ - 4.</u>** ಪ್ರಾ.ಸಾ.3/ಚಾ.ಸಾ.8 ಎ.ಪಿ.ವಿಶ್ವನಾಥ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ:04.02.2018 ರಂದು ಅವರು ಕರ್ತವ್ಯದಲ್ಲಿರುವಾಗ ಚಾ.ಸಾ.1 ರವರು ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಪರಿಶೀಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ದಿ:07.02.2018 ರಂದು ಪಂಚರ ಸಮಕ್ಷಮ ಕೃತ್ಯ ಸ್ಥಳಕ್ಕೆ ಬೇಟಿ ನೀಡಿ ಚಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ಮಾಹಜರ್ ಮಾಡಿ ಕಾಫಿ ಗಿಡದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡು ಚಾ.ಸಾ.1 ರವರ ಮರು ಹೇಳಿಕೆ ಪಡೆದಿರುತ್ತಾರೆ. ನಂತರ ಅಮಾನತ್ತು ಪಡಿಸಿದ ಸ್ವತ್ತನ್ನು ಸ್ವತ್ತು ಪಟ್ಟಿಯಲಿಲ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ನಂತರ ದಿ:23.03.2018 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದು, ದಿ:29.05.2018 ರಂದು ಕಂದಾಯ ನಿರೀಕ್ಷಕರಿಂದ ಕೃತ್ಯ ಸ್ಥಳದ ಪಹಣಿ ಪಡೆದು ದಿ:23.07.2018 ರಂದು ಆರೋಪಿಯಾದ ತಮ್ಮ ವಿರುಧ್ಧ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉ:

**<u>ಪ್ರಶ್ನೆ ಸಂಖ್ಯೆ - 5.</u>** ಪ್ರಾ.ಸಾ.4/ಚಾ.ಸಾ.5 ಮತ್ತು ಪ್ರಾ.ಸಾ.6/ಚಾ.ಸಾ.4 ಹರೀಶ್ ಮತ್ತು ಸುಬ್ಬಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಿ.ಪಿ.2 ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು ನಿ.ಪಿ.2 ಸಿ ಮತ್ತು ನಿ.ಪಿ.2 ಡಿ ಎಂದು ಗುರ್ತಿಸಿರುತ್ತಾರೆ, ಸದರಿ ಸಹಿಯನ್ನು ದಿ:07.02.2018 ರಂದು ಬಿರುನಾಣಿ ಗ್ರಾಮದ ಕಾಫಿ ಕಣದಲ್ಲಿ ಮಾಡಿರುತ್ತಾರೆ. ಪೋಲೀಸರು ಕಾಫಿ ದೊಣ್ಣೆಯನ್ನು ಅಮಾನತ್ತು ಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉ:

**<u>ಪ್ರಶ್ನೆ ಸಂಖ್ಯೆ - 6.</u>** ಪ್ರಾ.ಸಾ.5/ಚಾ.ಸಾ.3 ಎ.ಕೆ.ಸೋನಿಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ:04.02.2018 ರಂದು ಸಂಜೆ 6 ಗಂಟೆಗೆ ಚಾ.ಸಾ.5 ಮತ್ತು ಚಾ.ಸಾ.2 ಬಿರುನಾಣಿಯಲ್ಲಿ ಇರುವಾಗ 1ನೇ ಆರೋಪಿಯಾದ ನಿಮಗೂ ಚಾ.ಸಾ.1 ರವರಿಗೂ ಜಗಳವಾಗಿ, 1ನೇ ಆರೋಪಿಯಾದ ನೀವು ಬಲ ಗೈಯಿಂದ ಚಾ.ಸಾ.1 ರವರ ತಲೆಗೆ ಹೊಡೆದಿರುತ್ತೀರಿ, 2ನೇ ಆರೋಪಿಯಾದ ನೀವು ದೊಣ್ಣೆಯನ್ನು ತೆಗೆದುಕೊಂಡು ಚಾ.ಸಾ.1 ರವರ ಹೊಟ್ಟೆಗೆ ಹೊಡೆದಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

<u>ಪ್ರಶ್ನೆ ಸಂಖ್ಯೆ - 7.</u> ಪ್ರಾ.ಸಾ.8 ಡಾಃ ಸತೀಶ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ04.02.2018 ರಂದು ಸುಮಾರು ರಾತ್ರಿ 8.00 ಗಂಟೆಗೆ ಚಾ.ಸಾ.1 ರವರು ಹಲ್ಲೆಯ ಹಿನ್ನಲೆಯಲ್ಲಿ ತಪಾಸಣೆಗಾಗಿ ಶ್ರೀಮಂಗಲ ಪೋಲೀಸರು ಕರೆತಂದಿರುತ್ತಾರೆ. ಸದರಿ ವ್ಯಕ್ತಿಯನ್ನು ಪರಿಶೀಲಿಸಲಾಗಿ ಅವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ, ಅದರಂತೆ ನಿ.ಪಿ.6 ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

<u>ಪ್ರಶ್ನೆ ಸಂಖ್ಯೆ -8 :</u> ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ.

<u>ಪ್ರಶ್ನೆ ಸಂಖ್ಯೆ -9 :</u> ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಸುಳ್ಳು ಕೇಸ್ ಹಾಕಿದ್ದಾರೆ .

(ತೆರೆದ ನಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ~~16-12-2025~~ 6.1.26 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).

6.1.26

ಶ್ರೀನಾಥ್ ಎ
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್
ಪೊನ್ನಂಪೇಟೆ.

ಸ್ಥಳಃ ಪೊನ್ನಂಪೇಟೆ
ದಿಃ~~16.12.2025~~ 6.1.26.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:45/2019**

ಪಿರ್ಯಾದುದಾರರು: :ರಾಜ್ಯ ಸರ್ಕಾರ,
ಶ್ರೀಮಂಗಲ ಪೋಲೀಸ್ ಠಾಣೆ,

ವಿರುದ್ಧ

ಆರೋಪಿಗಳು: 1. ಶ್ರೀ ನೆಲ್ಲೀರ ಸುಬ್ಬಯ್ಯ,
ತಂದೆ: ಪೌತಿ ಮಾದಪ್ಪ,
ಪ್ರಾಯ: 65 ವರ್ಷ,
ವಾಸ: ಬಿರುನಾಣಿ ಗ್ರಾಮ,
ವಿರಾಜಪೇಟೆ ತಾಲ್ಲೂಕು, ಕೊಡಗು.

2. ಶ್ರೀ ತಮಿಳರ ಆರ್ಮುಗಂ,
ತಂದೆ: ಯಲ್ಲಮುತ್ತು,
ಪ್ರಾಯ: 33 ವರ್ಷ,
ವಾಸ: ಬಿರುನಾಣಿ ಗ್ರಾಮ,
ವಿರಾಜಪೇಟೆ ತಾಲ್ಲುಕು, ಕೊಡಗು.

ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ

ಪ್ರಶ್ನೆ ಸಂಖ್ಯೆ - 1 : ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?

ಉ: ಕೇಳಿದ್ದೇನೆ.

**ಪ್ರಶ್ನೆ ಸಂಖ್ಯೆ - 2.** ಪ್ರಾ.ಸಾ.1/ಚಾ.ಸಾ.1 ಶ್ರಿ ನೆಲ್ಲೀರ ರಾಜೇಂದ್ರ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ:04.02.2018 ರಂದು ಸಂಜೆ 6.20 ರಲ್ಲಿ ಚಾ.ಸಾ.1 ರವರು ಅವರ ಕಾಫಿ ಕಣದಲ್ಲಿ ಕೆಲಸ ಮಾಡುತ್ತಿದ್ದಾಗ, ಆರೋಪಿಯಾದ ನೀವು ಅಲ್ಲಿಗೆ ಹೋಗಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಕೊರಳ ಪಟ್ಟಿ ಹಿಡಿದು ತಮ್ಮ ಬಲಗೈಯಿಂದ ಅವರ ಹಣೆಗೆ ಹೊಡೆದಿರುತ್ತೀರಿ. 2 ನೇ ಆರೋಪಿಯಾದ ನೀವು ಅವರನ್ನು ಹಿಡಿದಿರುತ್ತೀರಿ ಮತ್ತು ಕಾಫಿ ದೊಣ್ಣೆಯಿಂದ ಚಾ.ಸಾ.1 ರವರ ಹೊಟ್ಟೆಗೆ ಹೊಡೆದು ಕಾಲಿನಿಂದ ಒದ್ದಿರುತ್ತೀರಿ. ಆರೋಪಿಗಳಾದ ನೀವು ಚಾ.ಸಾ.1 ರವರಿಗೆ ಬೆಂಗಳೂರಿನಿಂದ ರೌಡಿಗಳನ್ನು ಕರೆದುಕೊಂಡು ಬಂದು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತೀರಿ, ಅದೇ ದಿನ ಚಾ.ಸಾ.1 ರವರು ಶ್ರೀಮಂಗಲ ಪೋಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ದಿ:07.02.2018 ರಂದು ಪೋಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿ ಕಾಫಿ ದೊಣ್ಣೆಯನ್ನು ಅಮಾನತ್ತು ಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉ: ಸುಳ್ಳು

**ಪ್ರಶ್ನೆ ಸಂಖ್ಯೆ - 3.** ಪ್ರಾ.ಸಾ.2/ಚಾ.ಸಾ.6 ನಿಶಾನ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಸರ್ವೆ ನಂ.176/4 ಜಮೀನು ಯಾರು ಹೆಸರಿನಲ್ಲಿದೆ ಎಂದು ಶ್ರೀಮಂಗಲ

ಆರ್ಮುಗಂ

ಪೋಲೀಸರು ಅವರನ್ನು ಕೇಳಿರುತ್ತಾರೆ ಅದರಂತೆ ಅವರು ನೆಲ್ಲೀರಿ ರಾಜೇಂದ್ರ ರವರ ಹೆಸರಿನಲ್ಲಿ ಇದೆ ಎಂದು ಚಾ.ಸಾ.6 ರವರು ನಿ.ಪಿ.3 ವರದಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ

<u>ಪ್ರಶ್ನೆ ಸಂಖ್ಯೆ - **4.**</u> ಪ್ರಾ.ಸಾ.3/ಚಾ.ಸಾ.8 ವಿ.ಪಿ.ವಿಶ್ವನಾಥ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ04.02.2018 ರಂದು ಅವರು ಕರ್ತವ್ಯದಲ್ಲಿರುವಾಗ ಚಾ.ಸಾ.1 ರವರು ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಪರಿಶೀಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ದಿಃ07.02.2018 ರಂದು ಪಂಚರ ಸಮಕ್ಷಮ ಕೃತ್ಯ ಸ್ಥಳಕ್ಕೆ ಬೇಟಿ ನೀಡಿ ಚಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ಮಾಹಜರ್ ಮಾಡಿ ಕಾಫಿ ಗಿಡದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡು ಚಾ.ಸಾ.1 ರವರ ಮರು ಹೇಳಿಕೆ ಪಡೆದಿರುತ್ತಾರೆ. ನಂತರ ಅಮಾನತ್ತು ಪಡಿಸಿದ ಸ್ವತ್ತನ್ನು ಸ್ವತ್ತು ಪಟ್ಟಿಯಲಿಲ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ನಂತರ ದಿಃ23.03.2018 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದು, ದಿಃ29.05.2018 ರಂದು ಕಂದಾಯ ನಿರೀಕ್ಷಕರಿಂದ ಕೃತ್ಯ ಸ್ಥಳದ ಪಹಣಿ ಪಡೆದು ದಿಃ23.07.2018 ರಂದು ಆರೋಪಿಯಾದ ತಮ್ಮ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ

<u>ಪ್ರಶ್ನೆ ಸಂಖ್ಯೆ - **5.**</u> ಪ್ರಾ.ಸಾ.4/ಚಾ.ಸಾ.5 ಮತ್ತು ಪ್ರಾ.ಸಾ.6/ಚಾ.ಸಾ.4 ಹರೀಶ್ ಮತ್ತು ಸುಬ್ಬಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಿ.ಪಿ.2 ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು ನಿ.ಪಿ.2 ಸಿ ಮತ್ತು ನಿ.ಪಿ.2 ಡಿ ಎಂದು ಗುರ್ತಿಸಿರುತ್ತಾರೆ, ಸದರಿ ಸಹಿಯನ್ನು ದಿಃ07.02.2018 ರಂದು ಬಿರುನಾಣಿ ಗ್ರಾಮದ ಕಾಫಿ ಕಣದಲ್ಲಿ ಮಾಡಿರುತ್ತಾರೆ. ಪೋಲೀಸರು ಕಾಫಿ ದೊಣ್ಣೆಯನ್ನು ಅಮಾನತ್ತು ಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ

<u>ಪ್ರಶ್ನೆ ಸಂಖ್ಯೆ - **6.**</u> ಪ್ರಾ.ಸಾ.5/ಚಾ.ಸಾ.3 ವಿ.ಕೆ.ಸೋನಿಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ04.02.2018 ರಂದು ಸಂಜೆ 6 ಗಂಟೆಗೆ ಚಾ.ಸಾ.5 ಮತ್ತು ಚಾ.ಸಾ.2 ಬಿರುನಾಣಿಯಲ್ಲಿ ಇರುವಾಗ 1 ನೇ ಆರೋಪಿಯಾದ ನಿಮಗೂ ಚಾ.ಸಾ.1 ರವರಿಗೂ ಜಗಳವಾಗಿ, 1 ನೇ ಆರೋಪಿಯಾದ ನೀವು ಬಲ ಗೈಯಿಂದ ಚಾ.ಸಾ.1 ರವರ ತಲೆಗೆ ಹೊಡೆದಿರುತ್ತೀರಿ, 2 ನೇ ಆರೋಪಿಯಾದ ನೀವು ದೊಣ್ಣೆಯನ್ನು ತೆಗೆದುಕೊಂಡು ಚಾ.ಸಾ.1 ರವರ ಹೊಟ್ಟೆಗೆ ಹೊಡೆದಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ

<u>ಪ್ರಶ್ನೆ ಸಂಖ್ಯೆ - 7.</u> ಪ್ರಾ.ಸಾ.8 ಡಾಃ ಸತೀಶ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ04.02.2018 ರಂದು ಸುಮಾರು ರಾತ್ರಿ 8.00 ಗಂಟೆಗೆ ಚಾ.ಸಾ.1 ರವರು ಹಲ್ಲೆಯ ಹಿನ್ನಲೆಯಲ್ಲಿ ತಪಾಸಣೆಗಾಗಿ ಶ್ರೀಮಂಗಲ ಪೋಲೀಸರು ಕರೆತಂದಿರುತ್ತಾರೆ. ಸದರಿ ವ್ಯಕ್ತಿಯನ್ನು ಪರಿಶೀಲಿಸಲಾಗಿ ಅವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ, ಅದರಂತೆ ನಿ.ಪಿ.6 ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

<u>ಪ್ರಶ್ನೆ ಸಂಖ್ಯೆ 8 :</u> ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

<u>ಪ್ರಶ್ನೆ ಸಂಖ್ಯೆ 9 :</u> ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ ~~16-12-2025~~ 6-1-26 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).

6.1-26
ಶ್ರೀನಾಥ್ ಎ
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್
ಪೊನ್ನಂಪೇಟೆ.

ಸ್ಥಳಃ ಪೊನ್ನಂಪೇಟೆ
ದಿಃ ~~16.12.2025.~~ 6.1-26.